ಮೂಲ ದಾವಾ ಸಂಖ್ಯೆ. 4/2023 ಡಿ ಡಬ್ಲ್ಯೂ 7

(ದಿನಾಂಕ 05-01-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಮುಖ್ಯ ವಿಚಾರಣೆಃ ಪ್ರತಿವಾದಿ ಪರ ಶ್ರೀ ಎ ಕೆ ವಕೀಲರಿಂದಃ-

ನಾನು ನನ್ನ ಮುಖ್ಯ ವಿಚಾರಣಾ ಸಾಕ್ಷ್ಯದ ಕುರಿತು ನ್ಯಾಯಾಲಯದ ಮುಂದೆ ನನ್ನ ಸಾಕ್ಷಿ ಪ್ರಮಾಣಪತ್ರವನ್ನು ಸಲ್ಲಿಸಿದ್ದು ಇರುತ್ತದೆ. ಅದರಲ್ಲಿರುವ ಸಂಗತಿಗಳು ಸತ್ಯವಾಗಿದ್ದು ಅದಕ್ಕೆ ನಾನೇ ಸಹಿ ಮಾಡಿದ್ದೇನೆ.

ಪಾಟೀ ಸವಾಲುಃ ವಾದಿಯರ ಪರ ಶ್ರೀ ಹೆಚ್ ಹೆಚ್ ವಕೀಲರಿಂದಃ-

ಈ ದಾವೆಯನ್ನು ಕೊಟ್ರೇಶ್ ಇವರು ರಮೇಶ್ ಇವರ ಮೇಲೆ ದಾಖಲಿಸಿದ್ದಾರೆ. ಅವರು ಸೈಟ್ ವಿಚಾರಕ್ಕಾಗಿ ಈ ದಾವೆಯನ್ನು ದಾಖಲಿಸಿದ್ದಾರೆ. ಸದರಿ ಸೈಟ್ ವಿಚಾರ ನನಗೆ ಗೊತ್ತು. ಸದರಿ ಸೈಟ್ ನಂ.411 ಅದರ ವಿಸ್ತೀರ್ಣ 80 )( 50 ಅಡಿ ಇರುತ್ತದೆ. ಹನುಮಂತಪ್ಪ ಇವರಿಗೆ 3 ಜನ ಮಕ್ಕಳು ಅವರೆಂದರೆ ಕೊಟ್ರೇಶ್, ದೊಡ್ಡಬಸಪ್ಪ ಮತ್ತು ಉಡುಚಪ್ಪ ಇರುತ್ತಾರೆ. ನನ್ನ ತಂದೆಗೆ ಯಾರೂ ಸಹೋದರರು ಇರುವುದಿಲ್ಲ. ನನ್ನ ಸಾಕ್ಷಿ ಪ್ರಮಾಣಪತ್ರವನ್ನು ಬರೆಯಲು ಯಾರು ಮಾಹಿತಿ ಕೊಟ್ಟರೆಂದು ನನಗೆ ಗೊತ್ತಿಲ್ಲ, ನನಗೆ ಓದಲು ಬರೆಯಲು ಬರುತ್ತದೆ. ನನ್ನ ಸಾಕ್ಷಿ ಪ್ರಮಾಣಪತ್ರದಲ್ಲಿ ನನ್ನ ಅಜ್ಜಿಯ ಹೆಸರು ಹುಚ್ಚಮ್ಮ ಅಂತಾ ನಾನು ಬರೆಸಿರುವುದಿಲ್ಲ. ರಾಮಪ್ಪ, ಫಕೀರಪ್ಪ, ನಿಂಗಮ್ಮ, ಚಂದ್ರಪ್ಪ ಮತ್ತು ಶೇಖರಪ್ಪ ನನ್ನ ತಂದೆಯ ಸಹೋದರ ಸಹೋರಿಯರು ಅಲ್ಲ. ಚಂದ್ರಪ್ಪ ಮತ್ತು ಶೇಖರಪ್ಪ ನನ್ನ ತಂದೆಯ ಸಹೋದರರು ಇರುವುದಿಲ್ಲ.

ವಾದಿಯ ತಂದೆ ಶೇಖರಪ್ಪ ಇವರು ಉಲುವತ್ತಿ ಗ್ರಾಮದಲ್ಲಿ ವಾಸವಾಗಿದ್ದರು ಈಗ ಬೋರನಹಳ್ಳಿ ಗ್ರಾಮದಲ್ಲಿ ವಾಸವಾಗಿದ್ದಾರೆ. ಸದರಿಯವರು ಎಷ್ಟು ವರ್ಷದಿಂದ ಸದರಿ ಸೈಟ್ ನಲ್ಲಿ ವಾಸವಾಗಿದ್ದರು ಎಂದು ನನಗೆ ಗೊತ್ತಿಲ್ಲ ಆದರೆ ಸನ್ 1985 ರಲ್ಲಿ ಅವರು ಸೈಟನ್ನು ಕೊಟ್ಟಿರುತ್ತಾರೆನ್ನುತ್ತಾರೆ. ನಾನು ದಾವಾಸ್ತಿಯನ್ನು ನೋಡಿರುತ್ತೇನೆ ಅದರಲ್ಲಿ ಒಂದು ಹಳೇ ಮನೆ ಇದೆ ಎಂದರೆ ಸರಿ. ವಾದಿಯು ನನ್ನ ಸಂಬಂಧಿಕನಲ್ಲ. ದಾವಾಸ್ತಿಯ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸಹಾ ಪ್ರತಿವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸುಳ್ಳು ಸಾಕ್ಷಿ ಪ್ರಮಾಣಪತ್ರವನ್ನು ದಾಖಲುಪಡಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ವಾದಿಯ ಆಸ್ತಿಯನ್ನು ಪ್ರತಿವಾದಿಯರು ಕಬಳಿಸಬೇಕಂತ ಉದ್ದೇಶದಿಂದ ಅವರಿಗೆ ಅನುಕೂಲ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ